KAUP320000322018

**ಎರಡನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕಾ ದಂಡಾಧಿಕಾರಿಯವರ ನ್ಯಾಯಾಲಯ, ಕುಂದಾಪುರ**

**ಉಪಸ್ಥಿತರುಃ ಶ್ರೀಮತಿ. ಮಂಜುಳ ಬಿ.,**
**ಬಿ.ಎ.ಎಲ್., ಎಲ್.ಎಲ್.ಬಿ.,**
**ಎರಡನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ಗಳ ನ್ಯಾಯಾಲಯ, ಕುಂದಾಪುರ.**

**ದಿನಾಂಕ 11ನೇ ಜೂನ್, 2026**

**ಸಿ.ಸಿ. ಸಂಖ್ಯೆ 8/2018**

**ಪಿರ್ಯಾದಿದಾರರುಃ** ಕರ್ನಾಟಕ ಸರ್ಕಾರ ಪರವಾಗಿ
ಕೊಲ್ಲೂರು ಪೊಲೀಸ್ ಠಾಣೆ

**(ಸಹಾಯಕ ಸರ್ಕಾರಿ ಅಭಿಯೋಜಕರು)**

**::ವಿರುದ್ಧ::**

**ಆರೋಪಿತರುಃ** ಜಗದೀಶ್, 36 ವರ್ಷ,
ಬಿನ್ ಎಮ್ ಶೇಖರಪ್ಪ
ವಾಸ: ಮನೆ ನಂಬ್ರ 5147/ಬಿ,
ಅಲಗಿಲವಾಡ, ಹರಪನಹಳ್ಳಿ ತಾಲೂಕು,
ದಾವಣಗೆರೆ ಜಿಲ್ಲೆ.

**(ಶ್ರೀ ಆರ್.ಕೆ.ಎಮ್ ವಕೀಲರು)**

| | |
|---|---|
| ಅಪರಾಧ ಸಂಖ್ಯೆ | 131/2017 |
| ಘಟನೆ ನಡೆದ ದಿನಾಂಕ | 28/09/2017 |
| ಪ್ರಕರಣ ದಾಖಲಾದ ದಿನಾಂಕ | 28/09/2017 |
| ಪಿರ್ಯಾದಿಯ ಹೆಸರು | ಪವನ್ ಚಂದನ್ |
| ಸಾಕ್ಷ್ಯಗಳ ವಿಚಾರಣೆ ಪ್ರಾರಂಭವಾದ ದಿನಾಂಕ | 03/10/2023 |

| | |
|---|---|
| ಸಾಕ್ಷ್ಯಗಳ ವಿಚಾರಣೆ ಮುಕ್ತಾಯವಾದ ದಿನಾಂಕ | 19/11/2025 |
| ಆಪಾದನೆ ಕಲಂ ಗಳು | ಭಾ.ದಂ.ಸಂ. ಕಲಂ 279 ಮತ್ತು 304(ಎ). |
| ನ್ಯಾಯಾಧೀಶರ ಅಭಿಪ್ರಾಯ | ದೋಷಾರೋಪಣೆ ಸಾಬೀತಾಗಿರುವುದಿಲ್ಲ |
| ಆದೇಶ | ನಿರ್ದೂಷಿ |

MANJULA BETTASWAMY Digitally signed by MANJULA BETTASWAMY Date: 2026.06.11 16:10:10 +0530

**(ಮಂಜುಳ. ಬಿ.)**
**ಎರಡನೇ ದಿವಾಣಿ ನ್ಯಾಯಾಧೀಶರು**
**ಮತ್ತು ಪ್ರ.ದ.ನ್ಯಾ.ದಂ. ಗಳ ನ್ಯಾಯಾಲಯ,**
**ಕುಂದಾಪುರ. (ಪ್ರಭಾರ)**

# ತೀರ್ಪು

ಪೊಲೀಸ್ ವೃತ್ತ-ನಿರೀಕ್ಷಕರು, ಬೈಂದೂರು ವೃತ್ತ, ಉಡುಪಿ ಜಿಲ್ಲೆ ಇವರು ಆರೋಪಿತರ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ 279 ಮತ್ತು 304(ಎ) ರಡಿಯಲ್ಲಿ ಶಿಕ್ಷಿಸಲ್ಪಡುವ ಆರೋಪಗಳಿಗಾಗಿ ಠಾಣಾ ಗುನ್ನಾ ಸಂಖ್ಯೆ 131/2017 ರಂತೆ ಸಲ್ಲಿಸಿರುವ ದೋಷಾರೋಪಣ ಪಟ್ಟಿಯ ಆಧಾರದ ಮೇಲೆ ಪ್ರಕರಣವನ್ನು ನೊಂದಾಯಿಸಿಕೊಳ್ಳಲಾಗಿರುತ್ತದೆ.

**2) ಅಭಿಯೋಜನಾ ಪ್ರಕರಣದ ಸಂಕ್ಷಿಪ್ತ ಸಾರಾಂಶವೇನೆಂದರೆಃ**

ದಿನಾಂಕ 28/09/2017 ರಂದು ಕೊಲ್ಲೂರು ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಚಾಸಾ-1/ಪವನ್ ಚಂದನ್ ರವರು ಅವರ ಬಾಬ್ತು ಮೋಟಾರು ಸೈಕಲ್ ನಂಬ್ರ ಕೆಎ-20-ಜಡ್-2887ನೇದರಲ್ಲಿ ಅವರ ಸ್ನೇಹಿತ ಚಾಸಾ-2/ಹರೀಶ್ ಪೂಜಾರಿರವರೊಂದಿಗೆ ಕೊಲ್ಲೂರು ದೇವಸ್ಥಾನದ ಕಡೆಗೆ

ಹೋಗುತ್ತಿದ್ದಾಗ ಕುಂದಾಪುರ ಶಿವಮೊಗ್ಗ ರಾಜ್ಯ ಹೆದ್ದಾರಿಯ ಇಡೂರು ಕುಂಜ್ಞಾಡಿ ಗ್ರಾಮದ ಕುಕ್ಕುಡ ಕ್ರಾಸ್ ಬಳಿ ತಲುಪುವಾಗ ಚಾಸಾ-1/ಪವನ್ ಚಂದನ್‌ರವರ ಮೋಟಾರು ಸೈಕಲಿನ ಹಿಂದಿನಿಂದ, ಅಂದರೆ ಕುಂದಾಪುರ ಕಡೆಯಿಂದ ಕೊಲ್ಲೂರು ಕಡೆಗೆ ಕೆಎ-01-ಎಸಿ-9923 ನೇ ಬಸ್ಸನ್ನು ಅದರ ಚಾಲಕ ಜಗದೀಶ ಎಂಬಾತನು ಅತೀ ವೇಗ ಹಾಗೂ ನಿರ್ಲಕ್ಷ್ಯತನದಿಂದ ಚಲಾಯಿಸಿ ಚಾಸಾ-1/ಪವನ್ ಚಂದನ್‌ರವರ ಮೋಟಾರು ಸೈಕಲನ್ನು ಓವರ್ ಟೇಕ್ ಮಾಡಿ ರಸ್ತೆಯ ತೀರಾ ಬಲಬದಿಗೆ ಚಲಾಯಿಸಿ ಕೊಲ್ಲೂರು ಕಡೆಯಿಂದ ಕುಂದಾಪುರ ಕಡೆಗೆ ಸವಾರಿ ಮಾಡಿಕೊಂಡು ಹೋಗುತ್ತಿದ್ದ ಕೆಎ-20-ಇಜೆ-6071ನೇದಕ್ಕೆ ಡಿಕ್ಕಿ ಹೊಡೆದ ಪರಿಣಾಮ ಮೋಟಾರು ಸೈಕಲ್ ಸವಾರ ಪ್ರವೀಣ್ ಜಿ ಎಂಬುವವರು ಮೋಟಾರು ಸೈಕಲ್ ಸಮೇತ ರಸ್ತೆಗೆ ಬಿದ್ದು ತಲೆಗೆ ಮುಖಕ್ಕೆ ತೊಡೆಗೆ ತೀವ್ರ ಸ್ವರೂಪದ ರಕ್ತಗಾಯಗೊಂಡು ಸ್ಥಳದಲ್ಲೇ ಮೃತಪಟ್ಟಿರುತ್ತಾರೆ ಎಂಬುದಾಗಿರುತ್ತದೆ.

3) ದಿನಾಂಕ 28/09/2017ರಂದು ಸಮಯ 21:15 ಗಂಟೆಗೆ ಚಾಸಾ-1/ಪವನ್ ಚಂದನ್ ರವರು ನಿಪಿ-1ರಂತೆ ಲಿಖಿತ ದೂರು ಕೊಟ್ಟಿದ್ದು, ಚಾಸಾ-14/ಶೇಖರರವರು ದೂರನ್ನು ಸ್ವೀಕರಿಸಿ, ಠಾಣಾ ಮೊಕದಮ್ಮೆ ಸಂಖ್ಯೆ 131/2017ರಂತೆ ಪ್ರಕರಣವನ್ನು ದಾಖಲಿಸಿಕೊಂಡು, ದಿನಾಂಕ 29/09/2017ರಂದು ಸಮಯ 10:00 ಗಂಟೆಯಿಂದ 10:45 ಗಂಟೆವರೆಗೆ ಚಾಸಾ-1/ಪವನ್ ಚಂದನ್ ರವರು ತೋರಿಸಿದ ಸ್ಥಳದಲ್ಲಿ, ಚಾಸಾ-2/ಹರೀಶ್ ಪೂಜಾರಿ ಮತ್ತು ಚಾಸಾ-3/ಮಾಧವ ದೇವಾಡಿಗರವರ ಸಮಕ್ಷಮ ನಿಪಿ-2 ರಂತೆ ಅಪಘಾತ ಸ್ಥಳ ಪಂಚನಾಮೆಯನ್ನು ಮಾಡಿ ಆರೋಪಿತರನ್ನು ಬಂಧಿಸಿ ನಿಯಮಾವಳಿ ಪಾಲಿಸಿ ಸೂಕ್ತ ಜಾಮೀನಿನ ಆಧಾರದ ಮೇಲೆ ಬಿಡುಗಡೆ ಮಾಡಿರುತ್ತಾರೆ.

4) ತನಿಖಾಧಿಕಾರಿಯು ಪ್ರಕರಣದ ತನಿಖೆಯನ್ನು ಪೂರ್ಣಗೊಳಿಸಿ ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿದ ಮೇರೆಗೆ ಸದರಿ ಅಪರಾಧಗಳ ಮೇಲೆ ಸಂಜ್ಞೆಯನ್ನು ತೆಗೆದುಕೊಂಡು ಆರೋಪಿತನ ವಿರುದ್ಧ 3ನೇ ರಿಜಿಸ್ಟರದಲ್ಲಿ ಪ್ರಕರಣ ದಾಖಲಿಸಿಕೊಳ್ಳಲಾಯಿತು. ಆರೋಪಿತನು ನ್ಯಾಯಾಲಯದಿಂದ ಹೊರಡಿಸಿದ ಸಮನ್ಸ್‌ಗೆ ಉತ್ತರವಾಗಿ ನ್ಯಾಯಾಲಯದ ಮುಂದೆ ಬಂದು ಹಾಜರಾಗಿ ಜಾಮೀನು ಪಡೆದಿರುತ್ತಾರೆ. ಆರೋಪಿತನಿಗೆ ದಂಡ ಪ್ರಕ್ರಿಯಾ ಸಂಹಿತೆ ಕಲಂ 207 ರಲ್ಲಿ ತಿಳಿಸಿರುವಂತೆ ದೋಷಾರೋಪಣೆ ಪತ್ರದ ನಕಲುಗಳನ್ನು ಪೂರೈಸಲಾಗಿರುತ್ತದೆ.

5) ಆರೋಪಿತನ ಪರ ಹಾಗೂ ಅಭಿಯೋಜನೆಯವರ ವಾದವನ್ನು ಕೇಳಿ, ಆರೋಪಿತನ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ರಚಿಸಿ ಅದನ್ನು ಆರೋಪಿತನಿಗೆ ತಿಳಿಯುವ ಭಾಷೆಯಲ್ಲಿ ಓದಿ ಹೇಳಿ ಕೇಳಿದಾಗ ಅದನ್ನು ತಿಳಿದುಕೊಂಡು ತಾನು ಅಪರಾಧ ಮಾಡಿಲ್ಲಾ ವಿಚಾರಣೆಯಾಗಬೇಕು ಎಂದು ಕೇಳಿಕೊಂಡಿದ್ದರ ಮೇರೆಗೆ ಪ್ರಕರಣವನ್ನು ಸಾಕ್ಷ್ಯ ತೆಗೆದುಕೊಳ್ಳಲು ಇರಿಸಲಾಗಿದ್ದು, ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರ ವಿನಂತಿಯ ಮೇರೆಗೆ ಸಾಕ್ಷಿದಾರರಿಗೆ ನ್ಯಾಯಾಲಯಕ್ಕೆ ಬಂದು ಹಾಜರಾಗಿ, ಸಾಕ್ಷ್ಯ ನುಡಿಯಲು ಆದೇಶಿಸಲಾಗಿರುತ್ತದೆ.

6) ಅಭಿಯೋಜನೆಯವರು ಆರೋಪಿತನ ವಿರುದ್ಧ ಮಾಡಿದ ಆರೋಪವನ್ನು ಸಾಭೀತುಪಡಿಸುವ ಸಲುವಾಗಿ ಒಟ್ಟು 16 ಜನ ಸಾಕ್ಷಿದಾರರುಗಳಲ್ಲಿ 8 ಜನ ಸಾಕ್ಷ್ಯಾದಾರರನ್ನು ಪ್ರಾಸಾ-1 ರಿಂದ ಪ್ರಾಸಾ-8 ಎಂದು ವಿಚಾರಣೆಗೊಳಪಡಿಸಿ ಅವರುಗಳ ಕಡೆಯಿಂದ ಒಟ್ಟು 14 ದಾಖಲೆಗಳನ್ನು ನಿಪಿ-1 ರಿಂದ ನಿಪಿ-14 ಎಂದು ಹಾಜರುಪಡಿಸಿ ಗುರುತಿಸಿಕೊಂಡಿರುತ್ತಾರೆ.

7) ವಿಚಾರಣೆ ಮುಗಿದ ನಂತರ ಆರೋಪಿತರ ವಿರುದ್ದ ಸಾಕ್ಷಿದಾರರ ಹೇಳಿಕೆಗಳಲ್ಲಿದ್ದ ಸಾಕ್ಷ್ಯಗಳನ್ನು ದಂಡ ಪ್ರಕ್ರೀಯಾ ಸಂಹಿತೆ ಕಲಂ 313(1)(b) ರನ್ವಯ ಹೇಳಿಕೆಗಳನ್ನು ದಾಖಲಿಸಿಕೊಳ್ಳಲಾಗಿರುತ್ತದೆ. ಆ ಸಂದರ್ಭದಲ್ಲಿ ಆರೋಪಿತರು ತಮ್ಮ ಯಾವುದೇ ರೀತಿಯ ಪ್ರತಿರಕ್ಷಣೆ ಸಾಕ್ಷ್ಯ ಇಲ್ಲವೆಂದು ತಿಳಿಸಿರುತ್ತಾರೆ.

8) ಅಪರಾಧಿಕ ದಂಡ ಪ್ರಕ್ರಿಯಾ ಸಂಹಿತೆ 437(ಎ)ರಡಿಯಲ್ಲಿ ಆರೋಪಿತರಿಂದ ಜಾಮೀನು ತೆಗೆದುಕೊಳ್ಳಲಾಗಿರುತ್ತದೆ.

9) ಉಭಯತ್ರರ ವಾದ-ವಿವಾದಗಳನ್ನು ಕೇಳಿ ಕಡತವನ್ನು ಪರಿಶೀಲಿಸಿದಾಗ, ಈ ಕೆಳಗಿನ ಅಂಶಗಳು ನ್ಯಾಯಾಲಯದ ತೀರ್ಮಾನಕ್ಕೆ ಉದ್ಬವಿಸುತ್ತವೆ.

**ಅಂಶಗಳು**

1) ಅಭಿಯೋಜನಾ ಪಕ್ಷದವರು, ದಿನಾಂಕ 28/09/2017 ರಂದು ಕೊಲ್ಲೂರು ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಚಾಸಾ-1/ಪವನ್ ಚಂದನ್ ರವರು ಅವರ ಬಾಬ್ತು ಮೋಟಾರು ಸೈಕಲ್ ನಂಬ್ರ ಕೆಎ-20-ಜಡ್-2887ನೇದರಲ್ಲಿ ಅವರ ಸ್ನೇಹಿತ ಚಾಸಾ-2/ಹರೀಶ್ ಪೂಜಾರಿರವರೊಂದಿಗೆ ಕೊಲ್ಲೂರು ದೇವಸ್ಥಾನದ ಕಡೆಗೆ ಹೋಗುತ್ತಿದ್ದಾಗ ಕುಂದಾಪುರ ಶಿವಮೊಗ್ಗ ರಾಜ್ಯ ಹೆದ್ದಾರಿಯ ಇಡೂರು ಕುಂಜ್ಞಾಡಿ ಗ್ರಾಮದ ಕುಕ್ಕುಡ ಕ್ರಾಸ್ ಬಳಿ ತಲುಪುವಾಗ ಚಾಸಾ-1/ಪವನ್ ಚಂದನ್‌ರವರ ಮೋಟಾರು ಸೈಕಲಿನ ಹಿಂದಿನಿಂದ, ಅಂದರೆ ಕುಂದಾಪುರ ಕಡೆಯಿಂದ ಕೊಲ್ಲೂರು ಕಡೆಗೆ ಕೆಎ-01-ಎಸಿ-9923 ನೇ ಬಸ್ಸನ್ನು ಅದರ ಚಾಲಕ ಜಗದೀಶ ಎಂಬಾತನು ಅತೀ ವೇಗ ಹಾಗೂ ನಿರ್ಲಕ್ಷ್ಯತನದಿಂದ ಚಲಾಯಿಸಿ ಚಾಸಾ-1/ಪವನ್ ಚಂದನ್‌ರವರ ಮೋಟಾರು ಸೈಕಲನ್ನು ಓವರ್ ಟೇಕ್ ಮಾಡಿ ರಸ್ತೆಯ ತೀರಾ ಬಲಬದಿಗೆ ಚಲಾಯಿಸಿ ಕೊಲ್ಲೂರು

ಕಡೆಯಿಂದ ಕುಂದಾಪುರ ಕಡೆಗೆ ಸವಾರಿ ಮಾಡಿಕೊಂಡು ಹೋಗುತ್ತಿದ್ದ ಕೆಎ-20-ಇಜೆ-6071 ನೇದಕ್ಕೆ ಡಿಕ್ಕಿ ಹೊಡೆದು, ಆ ಮೂಲಕ ಆರೋಪಿತ ಭಾರತೀಯ ದಂಡ ಸಂಹಿತೆ ಕಲಂ 279 ರಡಿಯಲ್ಲಿ ದಂಡನೀಯ ಅಪರಾಧ ಎಸಗಿದ್ದಾರೆಂದು ಸಂಶಯಾತೀತವಾಗಿ ಸಾಭೀತು ಪಡಿಸಿದ್ದಾರೆಯೇ?

2) ಎರಡನೇಯದಾಗಿ, ಅದೇ ದಿನ, ಸಮಯ ಹಾಗೂ ಸ್ಥಳದಲ್ಲಿ, ಆರೋಪಿತ ಬಸ್ಸನ್ನು ಅತೀ ವೇಗ ಹಾಗೂ ನಿರ್ಲಕ್ಷ್ಯತನದಿಂದ ಚಲಾಯಿಸಿ ಚಾಸಾ-1/ಪವನ್ ಚಂದನ್‌ರವರ ಮೋಟಾರು ಸೈಕಲನ್ನು ಓವರ್ ಟೇಕ್ ಮಾಡಿ ರಸ್ತೆಯ ತೀರಾ ಬಲಬದಿಗೆ ಚಲಾಯಿಸಿ ಕೊಲ್ಲೂರು ಕಡೆಯಿಂದ ಕುಂದಾಪುರ ಕಡೆಗೆ ಸವಾರಿ ಮಾಡಿಕೊಂಡು ಹೋಗುತ್ತಿದ್ದ ಕೆಎ-20-ಇಜೆ-6071 ನೇದಕ್ಕೆ ಡಿಕ್ಕಿ ಹೊಡೆದ ಪರಿಣಾಮ ಮೋಟಾರು ಸೈಕಲ್ ಸವಾರ ಪ್ರವೀಣ್ ಜಿ ಎಂಬುವವರು ಮೋಟಾರು ಸೈಕಲ್ ಸಮೇತ ರಸ್ತೆಗೆ ಬಿದ್ದು ತಲೆಗೆ ಮುಖಕ್ಕೆ ತೊಡೆಗೆ ತೀವ್ರ ಸ್ವರೂಪದ ರಕ್ತಗಾಯಗೊಂಡು ಸ್ಥಳದಲ್ಲೇ ಮೃತಪಟ್ಟಿರುತ್ತಾರೆಂದು, ಆ ಮೂಲಕ ಆರೋಪಿತ ಭಾರತೀಯ ದಂಡ ಸಂಹಿತೆ ಕಲಂ 304(ಎ) ರಡಿಯಲ್ಲಿ ದಂಡನೀಯ ಅಪರಾಧ ಎಸಗಿದ್ದಾರೆಂದು ಸಂಶಯಾತೀತವಾಗಿ ಸಾಭೀತು ಪಡಿಸಿದ್ದಾರೆಯೇ?

3) ಯಾವ ಆದೇಶ?

10) ಅಭಿಯೋಜನಾ ಪಕ್ಷದ ಪರವಾಗಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರ ಮತ್ತು ಆರೋಪಿತರ ಪರ ವಕೀಲರ ವಾದವನ್ನು ಆಲಿಸಿ, ಲಭ್ಯವಿರುವ ಮೌಖಿಕ ಮತ್ತು ದಾಖಲಾತಿ ಸಾಕ್ಷ್ಯವನ್ನು ಪರಿಶೀಲಿಸಿ ಈ ಮೇಲೆ ಹೇಳಿದ ಅಂಶಗಳನ್ನು ಈ ಕೆಳಗಿನಂತೆ ಉತ್ತರಿಸಲಾಗಿದೇ:

ಅಂಶ ಸಂಖ್ಯೆ 1 ಮತ್ತು 2 : ನಕಾರಾತ್ಮಕವಾಗಿದೆ

ಅಂಶ ಸಂಖ್ಯೆ 3 : ಅಂತಿಮ ಆದೇಶದಂತೆ ಈ ಕೆಳಕಂಡ ಕಾರಣಗಳಂತೆ ಇರುತ್ತದೆ.

## ಕಾರಣಗಳು

11) **ಅಂಶ ಸಂಖ್ಯೆ. 1 ಮತ್ತು 2:** ಈ ಎರಡು ಅಂಶಗಳು ಒಂದೇ ಘಟನೆಗೆ ಸಂಬಂಧಪಟ್ಟಿದ್ದು, ಒಂದಕ್ಕೊಂದು ಸಂಬಂಧ ಪಟ್ಟಿರುವುದರಿಂದ ಅನೂಕೂಲತೆಯ ದೃಷ್ಟಿಯಿಂದ ಹಾಗೂ ಘಟನೆಯ ಪುನರಾವರ್ತೆಯನ್ನು ತಪ್ಪಿಸುವ ಸಲುವಾಗಿ ಸದರಿ ಈ ಎರಡು ಅಂಶಗಳನ್ನು ಒಟ್ಟಿಗೆ ಚರ್ಚೆಗೆ ತೆಗೆದುಕೊಳ್ಳಲಾಗಿದೆ.

12) ಅಭಿಯೋಜನೆಯವರ ಪ್ರಕರಣದಂತೆ, ದಿನಾಂಕ 28/09/2017 ರಂದು ಕೊಲ್ಲೂರು ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಚಾಸಾ-1/ಪವನ್ ಚಂದನ್ ರವರು ಅವರ ಬಾಬ್ತು ಮೋಟಾರು ಸೈಕಲ್ ನಂಬ್ರ ಕೆಎ-20-ಜಡ್-2887ನೇದರಲ್ಲಿ ಅವರ ಸ್ನೇಹಿತ ಚಾಸಾ-2/ಹರೀಶ್ ಪೂಜಾರಿರವರೊಂದಿಗೆ ಕೊಲ್ಲೂರು ದೇವಸ್ಥಾನದ ಕಡೆಗೆ ಹೋಗುತ್ತಿದ್ದಾಗ ಕುಂದಾಪುರ ಶಿವಮೊಗ್ಗ ರಾಜ್ಯ ಹೆದ್ದಾರಿಯ ಇಡೂರು ಕುಂಜ್ಞಾಡಿ ಗ್ರಾಮದ ಕುಕ್ಕುಡ ಕ್ರಾಸ್ ಬಳಿ ತಲುಪುವಾಗ ಚಾಸಾ-1/ಪವನ್ ಚಂದನ್‌ರವರ ಮೋಟಾರು ಸೈಕಲಿನ ಹಿಂದಿನಿಂದ, ಅಂದರೆ ಕುಂದಾಪುರ ಕಡೆಯಿಂದ ಕೊಲ್ಲೂರು ಕಡೆಗೆ ಕೆಎ-01-ಎಸಿ-9923 ನೇ ಬಸ್ಸನ್ನು ಅದರ ಚಾಲಕ ಜಗದೀಶ ಎಂಬಾತನು ಅತೀ ವೇಗ ಹಾಗೂ ನಿರ್ಲಕ್ಷ್ಯತನದಿಂದ ಚಲಾಯಿಸಿ ಚಾಸಾ-1/ಪವನ್ ಚಂದನ್‌ರವರ ಮೋಟಾರು ಸೈಕಲನ್ನು ಓವರ್ ಟೇಕ್ ಮಾಡಿ ರಸ್ತೆಯ ತೀರಾ ಬಲಬದಿಗೆ ಚಲಾಯಿಸಿ ಕೊಲ್ಲೂರು ಕಡೆಯಿಂದ ಕುಂದಾಪುರ ಕಡೆಗೆ ಸವಾರಿ ಮಾಡಿಕೊಂಡು ಹೋಗುತ್ತಿದ್ದ ಕೆಎ-20-ಇಜೆ-6071 ನೇದಕ್ಕೆ ಡಿಕ್ಕಿ ಹೊಡೆದ

ಪರಿಣಾಮ ಮೋಟಾರು ಸೈಕಲ್ ಸವಾರ ಪ್ರವೀಣ್ ಜಿ ಎಂಬುವವರು ಮೋಟಾರು ಸೈಕಲ್ ಸಮೇತ ರಸ್ತೆಗೆ ಬಿದ್ದು ತಲೆಗೆ ಮುಖಕ್ಕೆ ತೊಡೆಗೆ ತೀವ್ರ ಸ್ವರೂಪದ ರಕ್ತಗಾಯಗೊಂಡು ಸ್ಥಳದಲ್ಲೇ ಮೃತಪಟ್ಟಿರುತ್ತಾರೆ ಎಂಬುದಾಗಿರುತ್ತದೆ.

13) ಸಹಾಯಕ ಸರ್ಕಾರಿ ಅಭಿಯೋಜಕರ ವಿಚಾರಣಾ ಹಂತದಲ್ಲಿ ನಿಪಿ-8/ಇನಕ್ವೇಸ್ಟ್ ಪಂಚನಾಮೆ, ನಿಪಿ-9/ಪಿ.ಎಮ್. ವರದಿ ಹಾಗೂ ನಿಪಿ-10/ಐ.ಎಮ್.ವಿ. ವರದಿಗಳನ್ನು ಆರೋಪಿ ಪರ ವಕೀಲರ ಸಮ್ಮತಿಯ ಮೇರೆಗೆ, ಸಹಾಯಕ ಸರ್ಕಾರಿ ಅಭಿಯೋಜಕರು ಗುರುತಿಸಿಕೊಂಡಿದ್ದರಿಂದ ಮತ್ತು ವಿಚಾರಣ ಹಂತದಲ್ಲಿ ಚಾಸಾ-14ರವರಿಗೆ ಕೊಟ್ಟಂತಹ ವಾರೆಂಟ್ ಮೃತ ಪಟ್ಟಿರುತ್ತಾರೆಂಬ ಹಿಂಬರಹದೊಂದಿಗೆ ಮರಣ ಪ್ರಮಾಣ ಪತ್ರದೊಂದಿಗೆ ನ್ಯಾಯಾಲಯಕ್ಕೆ ಹಿಂತಿರುಗಿದ್ದರಿಂದ ಚಾಸಾ-4 ರಿಂದ ಚಾಸಾ-8, ಚಾಸಾ-12, ಚಾಸಾ-13 ಮತ್ತು ಚಾಸಾ-14 ರವರನ್ನು ಈ ಪ್ರಕರಣದಿಂದ ಕೈ ಬಿಡಲಾಗಿದ್ದು ಉಳಿದ ಸಾಕ್ಷಿದಾರರುಗಳ ಸಾಕ್ಷ್ಯಾವನ್ನಷ್ಟೆ ಈ ನ್ಯಾಯಾಲಯವು ಪರಿಶೀಲಿಸಿರುತ್ತದೆ.

14) ಪ್ರಾಸಾ-7 ಮತ್ತು 8 ರವರು ಈ ಪ್ರಕರಣದ ಔಪಚಾರಿಕ ಸಾಕ್ಷಿಗಳಾಗಿದ್ದು ಕೇವಲ ಸದರಿರವರ ಸಾಕ್ಷ್ಯದ ಆಧಾರದ ಮೇಲೆ ಆರೋಪಿತ ತಪ್ಪು ಎಸಗಿರುತ್ತಾನೆಂದು ನಿರ್ಣಯಿಸಲು ಬರುವುದಿಲ್ಲ. ಬದಲಿಗೆ ಸದರಿಯವರ ಸಾಕ್ಷ್ಯವನ್ನು ಇತರೆ ಸಾಕ್ಷ್ಯಧಾರಗಳ ಪೂರಕವಾಗಿ ಪರಿಗಣಿಸಬೇಕಾಗುತ್ತದೆ.

15) ಈ ನಿಟ್ಟಿನಲ್ಲಿ ಈ ಪ್ರಕರಣದ ಪಿರ್ಯಾದುದಾರ ಹಾಗೂ ಘಟನೆಯನ್ನು ನೋಡಿದ ಬಗ್ಗೆ ಹೇಳಿಕೆ ನೀಡಿರುತ್ತಾರೆಂದು ವಿಚಾರಣೆಗೊಳಪಟ್ಟ ಪ್ರಾಸಾ-1ರವರು ತಮ್ಮ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ ನಿಪಿ-1/ದೂರು ಹಾಗೂ ನಿಪಿ-2/ಸ್ಥಳ ಪಂಚನಾಮೆಗಳಲ್ಲಿನ ತನ್ನ ಸಹಿಗಳನ್ನು ಕ್ರಮವಾಗಿ ನಿಪಿ-1(ಎ) ಮತ್ತು ನಿಪಿ-2(ಎ) ಎಂದು ಹಾಗೂ ನಿಪಿ-3/ಘಟನಾ ಸ್ಥಳದಲ್ಲಿ ತೆಗೆದ ಫೋಟೋವನ್ನು ನೋಡಿ ಗುರುತಿಸಿ ಅಭಿಯೋಜನೆಗೆ ಪೂರಕವಾದ ಸಾಕ್ಷ್ಯ ನುಡಿದಿರುತ್ತಾರೆ.

16) ಪ್ರಾಸಾ-1 ರವರ ಜೊತೆ ಹಿಂಬದಿ ಸವಾರರಾಗಿದ್ದ ವಾ ಪ್ರತ್ಯಕ್ಷದರ್ಶಿ ಹಾಗೂ ಈ ಪ್ರಕರಣದ ಮತ್ತೊಬ್ಬ ಪ್ರತ್ಯಕ್ಷ ಸಾಕ್ಷಿದಾರನೆಂದು ವಿಚಾರಣೆಗೊಳಪಟ್ಟ ಪ್ರಾಸಾ-2 ಮತ್ತು ಪ್ರಾಸಾ-3 ರವರು ತಮ್ಮ ತಮ್ಮ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ ನಿಪಿ-2/ಸ್ಥಳ ಪಂಚನಾಮೆ ಮತ್ತು ನಿಪಿ-4/ನಕಾಶೆಗಳಲ್ಲಿನ ತಮ್ಮ ಸಹಿಗಳನ್ನು ಕ್ರಮವಾಗಿ ನಿಪಿ-2(ಬಿ), 2(ಸಿ), ನಿಪಿ-4(ಎ), 4(ಸಿ) ಹಾಗೂ ಘಟನಾ ಸ್ಥಳದ ಪೋಟೋ ಹಾಗೂ ವಾಹನಗಳ ಛಾಯಾಚಿತ್ರ ಹಾಗೂ ಸಿಡಿಗಳನ್ನು ನೋಡಿ ಕ್ರಮವಾಗಿ ನಿಪಿ-3, ನಿಪಿ-5 ರಿಂದ ನಿಪಿ-7 ಅಂತ ನೋಡಿ ಗುರುತಿಸಿ ಅಭಿಯೋಜನೆಗೆ ಪೂರಕವಾದ ಸಾಕ್ಷ್ಯ ನುಡಿದಿರುತ್ತಾರೆ.

17) ಈ ಪ್ರಕರಣದ ದಸ್ತಗಿರಿ ಪಂಚನಾಮೆಯ ಪಂಚರೆಂದು ವಿಚಾರಣೆಗೊಳಪಟ್ಟ ಪ್ರಾಸಾ-4 ಮತ್ತು 5ರವರು ತಮ್ಮ ತಮ್ಮ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ ನಿಪಿ-11/ದಸ್ತಗಿರಿ ಮಹಜರಿನಲ್ಲಿರುವ ತಮ್ಮ ಸಹಿಗಳನ್ನು ಕ್ರಮವಾಗಿ ನಿಪಿ-11(ಎ) ಮತ್ತು ನಿಪಿ-11(ಬಿ) ಅಂತ ಗುರುತಿಸಿ ಅಭಿಯೋಜನೆಗೆ ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಹೊರಹೊಮ್ಮಿದ್ದರೂ ಸಹ ನಿಪಿ-11ರ ದಾಖಲೆಯಂತೆ ದಿನಾಂಕ 02/10/2017 ರಂದು ಸಮಯ 10:00 ರಿಂದ

10:30 ಗಂಟೆಯವರೆಗೆ ಪ್ರಾಸಾ-4 ಮತ್ತು ಪ್ರಾಸಾ-5ರವರ ಸಮಕ್ಷಮದಲ್ಲಿ ಆರೋಪಿತನನ್ನು ದಸ್ತಗಿರಿ ಮಾಡಿರುತ್ತಾರೆಂಬ ವಿಚಾರ ಸ್ಪಷ್ಟ ಸಂಗತಿಯಾಗಿರುತ್ತದೆ.

18) ಇನ್ನು ಈ ಪ್ರಕರಣದಲ್ಲಿ ಅಪಘಾತಪಡಿಸಿತು ಎನ್ನಲಾದ ಕೆಎ-01-ಎಸಿ-9923ನೇ ಬಸ್ಸಿನ ಜಿಪಿಎ ನೋಂದಣಿ ಮಾಲಿಕರಾದ ಪ್ರಾಸಾ-6ರವರು ತಮ್ಮ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ ನಿಪಿ-12/ನೋಟಿಸು ಮತ್ತು ನಿಪಿ-13/ಉತ್ತರ ನೋಟಿಸಿನಲ್ಲಿರುವ ತನ್ನ ಸಹಿಯನ್ನು ನಿಪಿ-12(ಎ) ಮತ್ತು 13(ಎ) ಅಂತ ಮತ್ತು ನಿಪಿ-5/ಬಸ್ಸಿನ ಫೋಟೋವನ್ನು ನೋಡಿ ಗುರುತಿಸಿ ಅಭಿಯೋಜನೆಗೆ ಪೂರಕವಾದ ಸಾಕ್ಷ್ಯ ನುಡಿದಿದ್ದರೂ ಸಹ ಮಾನ್ಯ ಆರೋಪಿ ಪರ ವಕೀಲರ ಪಾಟೀ ಸವಾಲಿನಲ್ಲಿ ಪೋಲಿಸರು ಬಸ್ಸಿನ ದಾಖಲೆಗಳನ್ನು ಕೇಳಿದ್ದನ್ನು ಹೊರತುಪಡಿಸಿ ತನಗೆ ಅಪಘಾತದ ಬಗ್ಗೆ ಹಾಗೂ ಆರೋಪಿತ ಬಸ್ಸಿನ ಚಾಲಕನಾಗಿದ್ದನು ಎಂಬುದರ ಬಗ್ಗೆ ಪೋಲಿಸರು ಯಾವುದೇ ದಾಖಲಾತಿಗಳನ್ನು ಪಡೆದುಕೊಂಡಿರುವುದಿಲ್ಲ ಎಂಬುದನ್ನು ಸರಿ ಅಂತ ಒಪ್ಪಿಕೊಂಡಿದ್ದರೂ ನಿಪಿ-13ರ ದಾಖಲೆಯಂತೆ ಅಪಘಾತದ ದಿನ ಆರೋಪಿ ಚಾಲಕ ಪ್ರಶ್ನಿತ ಬಸ್ಸಿನ ಚಾಲಕನಾಗಿದ್ದನು ಎಂಬ ವಿಚಾರ ಸ್ಪಷ್ಟ ಸಂಗತಿಯಾಗಿರುತ್ತದೆ.

19) ಅಭಿಯೋಜನೆಯವರು ಕೇವಲ ಆರೋಪಿ ಚಾಲಕ ಪ್ರಶ್ನಿತ ಅಪಘಾತದ ದಿನ ಅಪಘಾತಪಡಿಸಿತು ಎನ್ನಲಾದ ವಾಹನದ ಚಾಲಕನಾಗಿದ್ದನು ಎಂಬುದನ್ನು ಮಾತ್ರ ಸಾಬೀತುಪಡಿಸಿದರೇ ಸಾಲದು ಬದಲಿಗೆ ಸದರಿ ಅಪಘಾತವು ಆರೋಪಿ ಚಾಲಕನ ಅತೀ ವೇಗ ಅಥವಾ ಅಜಾಗರೂಕ ಚಾಲನೆಯಿಂದಲೇ ಸಂಭವಿಸಿರುತ್ತದೆಂಬುದನ್ನು ಸಾಬೀತುಪಡಿಸಬೇಕಾಗಿದ್ದು, ಈ ನಿಟ್ಟಿನಲ್ಲಿ

ವಿಚಾರಣೆಗೊಳಗೊಂಡ ಪ್ರಾಸಾ-1 ರಿಂದ ಪ್ರಾಸಾ-3 ರವರು ಸಹ ಆರೋಪಿ ಚಾಲಕನ ಅತೀವೇಗ ಅಥವಾ ನಿರ್ಲಕ್ಷ್ಯತನದ ಬಗ್ಗೆ ಸಾಕ್ಷ್ಯ ನುಡಿದಿರುವುದಿಲ್ಲ. ಘಟನಾ ಸ್ಥಳದ ಪ್ರತ್ಯಕ್ಷ ವಾ ಸ್ವತಂತ್ರ ಸಾಕ್ಷಿದಾರ ಎನ್ನಲಾದ ಪ್ರಾಸಾ-3ರವರು ಆರೋಪಿ ಪರ ವಕೀಲರ ಪಾಟೀ ಸವಾಲಿನಲ್ಲಿ ತಾನು ಅಪಘಾತವಾದ ಸಮಯದಲ್ಲಿ ಮನೆಯಲ್ಲಿ ಇದ್ದೆ. ಮಾಹಿತಿ ಬಂದ ನಂತರ ಸ್ಥಳಕ್ಕೆ ಹೋಗಿರುತ್ತೇನೆಂದು ಹೇಳಿರುವುದನ್ನು ಗಮನಿಸಿದರೆ ಪ್ರಾಸಾ-3 ರವರು ಘಟನಾ ಸಮಯದಲ್ಲಿ ಇದ್ದು ಘಟನೆಯನ್ನು ನೋಡಿರುತ್ತಾರೆಂದು ಮುಖ್ಯ ವಿಚಾರಣೆಯಲ್ಲಿ ಹೇಳಿರುವ ವಿಚಾರಗಳು ಅಸಹಜಕತೆಯಿಂದ ಕೂಡಿದ್ದು ಸದರಿಯವರ ಸಾಕ್ಷ್ಯವು ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಯಾವುದೇ ರೀತಿಯಿಂದಲೂ ಪ್ರಯೋಜನಕಾರಿಯಾಗಿರುವುದಿಲ್ಲ.

20) ಇನ್ನು ಈ ಪ್ರಕರಣದ ದೂರುದಾರ/ಪ್ರಾಸಾ-1 ಮಾನ್ಯ ಆರೋಪಿ ಪರ ವಕೀಲರ ಪಾಟೀ ಸವಾಲಿನಲ್ಲಿ ಬಸ್ಸು ತನ್ನ ಮುಂದೆ ಇತ್ತು ಎಂತಲೂ ಬಸ್ಸಿನ ಮುಂಭಾಗ ತನಗೆ ಕಾಣಿಸುತ್ತಿರಲಿಲ್ಲವೆಂದು ಸಾಕ್ಷ್ಯ ನುಡಿದಿರುವುದನ್ನು ಗಮನಿಸಿದರೇ ಹಾಗೂ ಪ್ರಾಸಾ-1ರವರ ಹಿಂಬದಿ ಸವಾರರಾದ ಪ್ರಾಸಾ-2ರವರು ಬಸ್ಸಿನ ಮಧ್ಯಭಾಗ ಗಾಯಾಳುವಿಗೆ ಡಿಕ್ಕಿಪಡಿಸಿರುತ್ತದೆಂದು ಸಾಕ್ಷ್ಯ ನುಡಿದಿರುವುದನ್ನು ಗಮನಿಸಿ ನಿಪಿ-10 ಆರೋಪಿ ಪರ ವಕೀಲರ ಸಮ್ಮತಿ ಮೇರೆಗೆ ಗುರುತಿಸಿಕೊಳ್ಳಲಾದ ಮೋಟಾರು ವಾಹನ ತಪಾಸಣಾ ವರದಿಯನ್ನು ಪರಿಶೀಲಿಸಲಾಗಿ ಅಪಘಾತಪಡಿಸಿತು ಎನ್ನಲಾದ ಬಸ್ಸಿಗೆ ಬಲ ಹಿಂಭಾಗದ ಕೆಳಭಾಗದ ಲೈಟ್ ಜಖಂಗೊಂಡಂತೆ ನಮೂದಿಸಲಾಗಿದ್ದು ದ್ವಿಚಕ್ರ ವಾಹನಕ್ಕೆ ಎಡಬದಿಯ ಹ್ಯಾಂಡಲ್ ಡೂಮ್, ಹಿಂಭಾಗದ ಎಡಬದಿಯ ಬಾಡಿ ಕವರ್, ಎಡ ಬದಿಯ ಗಾರ್ಡ ಹಾಗೂ ಬಲ ಬದಿಯ ಪೂಟ್ ರೆಸ್ಟ ಡ್ಯಾಮೇಜ್ ಆಗಿತ್ತು ಅಂತ ನಮೂದಿಸಿದ್ದು, ಪ್ರಾಸಾ-2 ರವರು

ಹೇಳಿರುವಂತೆ ಬಸ್ಸಿನ ಮಧ್ಯ ಭಾಗ ದ್ವಿಚಕ್ರ ವಾಹನಕ್ಕೆ ತಾಗಿದ ಬಗ್ಗೆ ಎಲ್ಲಿಯೂ ಸಹ ನಮೂದಿಸಿರುವುದಿಲ್ಲ. ಈ ಬಗ್ಗೆ ತನಿಖಾಧಿಕಾರಿಗಳು ಸಹ ದ್ವಿಚಕ್ರ ವಾಹನದ ಯಾವ ಭಾಗಕ್ಕೆ ಬಸ್ ಡಿಕ್ಕಿಪಡಿಸಿರುತ್ತದೆಂಬುದರ ಬಗ್ಗೆ ಯಾವುದೇ ಸ್ಪಷ್ಟ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಹಾಗೂ ಈ ಬಗ್ಗೆ ಯಾವುದೇ ಸಾಕ್ಷಿದಾರರು ಸಾಕ್ಷಿ ನುಡಿದಿರುವುದಿಲ್ಲ. ಹೀಗೆ ಪ್ರಾಸಾ-1 ಮತ್ತು ಪ್ರಾಸಾ-2ರವರ ಪಾಟೀ ಸವಾಲಿನ ಹೇಳಿಕೆಗಳು ಮುಖ್ಯ ವಿಚಾರಣೆಗೆ ಹಾಗೂ ಆರೋಪಿತನ ಅತೀವೇಗ ಹಾಗೂ ಅಜಾಗರೂಕ ಚಾಲನೆಗೆ ಸಂಬಂಧಪಟ್ಟಂತೆ ಒಂದಕ್ಕೊಂದು ಸಾಮ್ಯತೆ ಇಲ್ಲದೇ ಇರುವುದರಿಂದ ಹಾಗೂ ಮತ್ತೊಬ್ಬ ಪ್ರತ್ಯಕ್ಷ ಸಾಕ್ಷಿದಾರ ಘಟನಾ ಸ್ಥಳದಲ್ಲಿ ಇಲ್ಲದೇ ಇದ್ದರೂ ಸಹ ಇದ್ದೇ ಎಂದು ಸಾಕ್ಷಿ ನುಡಿದಿರುವುದನ್ನು ಗಮನಿಸಿದರೆ ಸದರಿ ಪ್ರಕರಣ ಪ್ರಾಸಾ-1 ರವರು ಹೇಳಿದಂತೆ ನಡೆದಿರುತ್ತದೆಂಬುದರ ಬಗ್ಗೆ ಹಲವು ಸಂಶಯಗುಳ ಮೂಡಿರುವುದರಿಂದ, ಅಪಘಾತದ ಸಮಯದಲ್ಲಿ ಆರೋಪಿತ ಕೆಎ-01-ಎಸಿ-9923ನೇ ಸಂಖ್ಯೆಯ ಬಸ್ಸನ್ನು ಅತೀ ವೇಗ ಹಾಗೂ ಅಜಾಗರೂಕತೆಯಿಂದ ಮಾನವೀಯ ಜೀವಕ್ಕೆ ಹಾನಿಯಾಗುವ ರೀತಿಯಲ್ಲಿ ಚಲಾಯಿಸಿಕೊಂಡು ಹೋಗಿ ಸದರಿ ಅಪಘಾತವನ್ನುಂಟು ಮಾಡಿರುತ್ತಾನೆಂದು ಸಂಶಯತೀತವಾಗಿ ರುಜುವಾತು ಪಡಿಸಲು ಅಭಿಯೋಜನೆಯವರು ವಿಫಲರಾಗಿದ್ದು, ಈ ಸಂಶಯದ ಲಾಭವನ್ನು ಆರೋಪಿತನಿಗೆ ನೀಡಿ ಅಂಶ 1 ಮತ್ತು 2ನ್ನು ನಕರಾತ್ಮಕವಾಗಿ ಉತ್ತರಿಸಲಾಗಿರುತ್ತದೆ.

21) **ಅಂಶ ಸಂಖ್ಯೆ 3 :**- ಅಂಶ 1 ಮತ್ತು 2 ರಲ್ಲಿ ಹೇಳಲಾದ ಕಾರಣಗಳಿಂದ ಈ ಕೆಳಕಂಡಂತೆ ಆದೇಶಿಸಿರುತ್ತೇನೆ.

## ಆದೇಶ

ದಂಡ ಪ್ರಕ್ರಿಯಾ ಸಂಹಿತೆ, 1973 ಕಲಂ 248(1) ರಡಿಯಲ್ಲಿ ಆರೋಪಿತನನ್ನು ಭಾರತೀಯ ದಂಡ ಸಂಹಿತೆ ಕಲಂ 279 ಮತ್ತು 304(ಎ)ರ ಅಪಾದನೆಗಳಿಂದ ದೋಷಮುಕ್ತಗೊಳಿಸಿ ಕುಲಾಸೆ ಮಾಡಲಾಗಿದೆ.

ಆರೋಪಿತನ ಹಾಗೂ ಅವರ ಜಾಮೀನುದಾರರು ಬರೆದುಕೊಟ್ಟ ಜಾಮೀನು ಮುಚ್ಚಳಿಕೆ ಪತ್ರ ಈ ತೀರ್ಪು ನೀಡಿದ ದಿನಾಂಕದಿಂದ 6 ತಿಂಗಳ ನಂತರ ರದ್ದಾಗತಕ್ಕದ್ದು ಎಂದು ಆದೇಶಿಸಲಾಗಿದೆ.

**(ಈ ಮೇಲ್ಕಂಡ ತೀರ್ಪನ್ನು ಶೀಘ್ರಲಿಪಿಗಾರರಿಗೆ ನೇರವಾಗಿ ಕಂಪ್ಯೂಟರ್‌ನಲ್ಲಿ ನೀಡಿ, ನಂತರ ಓದಿ, ತಪ್ಪುಗಳನ್ನು ತಿದ್ದಿ ರುಜುವಿನೊಂದಿಗೆ ಮುಕ್ತ ನ್ಯಾಯಾಲಯದಲ್ಲಿ ದಿನಾಂಕ 11ನೇ ಜೂನ್, 2026 ರಂದು ಘೋಷಿಸಲ್ಪಟ್ಟಿತು)**

MANJULA BETTASWAMY
Digitally signed by MANJULA BETTASWAMY
Date: 2026.06.11 16:10:20 +0530

**(ಮಂಜುಳ. ಬಿ.)**
**ಎರಡನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಗಳ ನ್ಯಾಯಾಲಯ, ಕುಂದಾಪುರ.**(ಪ್ರಭಾರ)

## ಅನುಬಂಧ

**ಅಭಿಯೋಜಕರ ಪರವಾಗಿ ವಿಚಾರಿಸಲ್ಪಟ್ಟ ಸಾಕ್ಷಿದಾರರ ವಿವರ :**

ಪ್ರಾಸಾ-1) ಪವನ್ ಚಂದ್ರ
ಪ್ರಾಸಾ-2) ಹರೀಶ್ ಪೂಜಾರಿ
ಪ್ರಾಸಾ-3) ಮಾಧವ್ ದೇವಾಡಿಗ
ಪ್ರಾಸಾ-4) ಬಿ. ಬಸವನ ಗೌಡ
ಪ್ರಾಸಾ-5) ನಾಗರಾಜ ಹೆಚ್
ಪ್ರಾಸಾ-6) ಅಣ್ಣೇಶ್ ಕೆ
ಪ್ರಾಸಾ-7) ರಾಘವ ಎಸ್ ಪಡಿನ್
ಪ್ರಾಸಾ-8) ಪರಮೇಶ್ವರ ಆರ್ ಗುಣಾಗರ

**ಅಭಿಯೋಜಕರ ಪರವಾಗಿ ಗುರ್ತಿಸಲ್ಪಟ್ಟ ದಾಖಲಾತಿಗಳ ವಿವರ :**

ನಿಪಿ1) : ದೂರು
ನಿಪಿ1(ಎ) : ಪ್ರಾಸಾ-1ರವರ ಸಹಿ
ನಿಪಿ2) : ಸ್ಥಳ ಮಹಜರು
ನಿಪಿ2(ಎ) : ಪ್ರಾಸಾ-1ರವರ ಸಹಿ
ನಿಪಿ2(ಬಿ) : ಪ್ರಾಸಾ-2ರವರ ಸಹಿ
ನಿಪಿ2(ಸಿ) : ಪ್ರಾಸಾ-3ರವರ ಸಹಿ
ನಿಪಿ2(ಡಿ) : ಪ್ರಾಸಾ-7ರವರ ಸಹಿ
ನಿಪಿ3 : ಛಾಯಾಚಿತ್ರ
ನಿಪಿ3(ಎ) : ಪ್ರಾಸಾ-7ರವರ ಸಹಿ
ನಿಪಿ4) : ಕಚ್ಛಾ ನಕಾಶೆ
ನಿಪಿ4(ಎ) : ಪ್ರಾಸಾ-2ರವರ ಸಹಿ
ನಿಪಿ4(ಸಿ) : ಪ್ರಾಸಾ-3ರವರ ಸಹಿ
ನಿಪಿ4(ಡಿ) : ಪ್ರಾಸಾ-7ರವರ ಸಹಿ
ನಿಪಿ5 ಮತ್ತು 6 : ಛಾಯಾಚಿತ್ರಗಳು
ನಿಪಿ7 : ಸಿ.ಡಿ.
ನಿಪಿ 8) : ಇಂಕ್ವೇಸ್ಟ್
ನಿಪಿ 8(ಎ): ಪ್ರಾಸಾ-7 ರವರ ಸಹಿ
ನಿಪಿ 9) : ಪಿ ಎಮ್ ವರದಿ
ನಿಪಿ 9 (ಎ): ಪ್ರಾಸಾ-8 ರವರ ಸಹಿ
ನಿಪಿ10) : ಐ.ಎಮ್.ವಿ. ವರದಿ
ನಿಪಿ 10 (ಎ): ಪ್ರಾಸಾ-7 ರವರ ಸಹಿ
ನಿಪಿ11) : ದಸ್ತಗಿರಿ ಪಂಚನಾಮೆ
ನಿಪಿ11(ಎ) : ಪ್ರಾಸಾ-4ರವರ ಸಹಿ
ನಿಪಿ11(ಬಿ) : ಪ್ರಾಸಾ-5ರವರ ಸಹಿ
ನಿಪಿ11(ಸಿ): ಪ್ರಾಸಾ-7ರವರ ಸಹಿ
ನಿಪಿ12) : ಮೊ.ವಾ.ಕಾಯಿದೆಯ ಕಲಂ 133ರ ನೋಟೀಸು
ನಿಪಿ12(ಎ): ಪ್ರಾಸಾ-7ರವರ ಸಹಿ
ನಿಪಿ13) : ಉತ್ತರ ನೋಟಿಸು
ನಿಪಿ13(ಎ): ಪ್ರಾಸಾ-6ರವರ ಸಹಿ
ನಿಪಿ13(ಬಿ) : ಪ್ರಾಸಾ-7ರವರ ಸಹಿ
ನಿಪಿ14) : ಇಂಡೆಮ್ನಿಟಿ ಬಾಂಡ್
ನಿಪಿ14(ಎ): ಪ್ರಾಸಾ-7ರವರ ಸಹಿ

**ಅಭಿಯೋಜಕರ ಪರವಾಗಿ ಗುರ್ತಿಸಲ್ಪಟ್ಟ ಮುದ್ದೆ ಮಾಲುಗಳ ವಿವರ:** ಇಲ್ಲಾ

**ಆರೋಪಿತರ ಪರವಾಗಿ ವಿಚಾರಿಸಲ್ಪಟ್ಟ ಸಾಕ್ಷಿದಾರರ ವಿವರ :** ಇಲ್ಲಾ

**ಆರೋಪಿತರ ಪರವಾಗಿ ಗುರ್ತಿಸಲ್ಪಟ್ಟ ದಾಖಲಾತಿಗಳ ವಿವರ :** ಇಲ್ಲಾ

**ಆರೋಪಿತರ ಪರವಾಗಿ ಗುರ್ತಿಸಲ್ಪಟ್ಟ ಮುದ್ದೆ ಮಾಲುಗಳ ವಿವರ :** ಇಲ್ಲಾ

MANJULA BETTASWAMY
Digitally signed by MANJULA BETTASWAMY
Date: 2026.06.11 16:10:16 +0530

**(ಮಂಜುಳ. ಬಿ.)**
**ಎರಡನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು**
**ಮತ್ತು ಪ್ರ.ದ.ನ್ಯಾ.ದಂ. ಗಳ ನ್ಯಾಯಾಲಯ,**
**ಕುಂದಾಪುರ.**(ಪ್ರಭಾರ)